ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

14

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 13/2/2021

# ಯತ್ನಾಳ್‌ಗೆ ಬಿಜೆಪಿ ಖಡಕ್ ನೋಟಿಸ್

ಕ.ಪ್ರ. 13-2-21

## ಪಕ್ಷದ ವಿರುದ್ಧ ಮಾತನಾಡಿದ್ದಕ್ಕೆ ಶಿಸ್ತು ಕ್ರಮ
## ಯಡಿಯೂರಪ್ಪ ಬೆನ್ನಿಗೆ ನಿಂತ ದೆಹಲಿ ವರಿಷ್ಠರು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ಪದೇ ಪದೇ ಬಹಿರಂಗವಾಗಿ ಟೀಕೆ ಮಾಡುತ್ತಿರುವ ಆಡಳಿತಾರೂಢ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರಿಗೆ ಕೊನೆಗೂ ಶಿಸ್ತು ಕ್ರಮದ ನೋಟಿಸ್ ಜಾರಿಯಾಗಿದೆ.

ಈ ಮೂಲಕ ಪಕ್ಷದ ನಾಯಕತ್ವದ ವಿರುದ್ಧ ಟೀಕೆ ಮಾಡುವವರನ್ನು ಸಹಿಸುವುದಿಲ್ಲ ಎಂಬ ಸಂದೇಶವನ್ನು ರವಾನಿಸಿರುವ ಬಿಜೆಪಿ ಹೈಕಮಾಂಡ್ ಪರೋಕ್ಷವಾಗಿ ಎಚ್ಚರಿಕೆ ನೀಡಿದೆ. ಅಲ್ಲದೆ, ಯತ್ನಾಳ ಅವರಿಗೆ ನೋಟಿಸ್ ನೀಡುವ ಮೂಲಕ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಬೆನ್ನಿಗೆ ಗಟ್ಟಿಯಾಗಿ ನಿಂತಂತಾಗಿದೆ.

ನೋಟಿಸ್ ನೀಡಿರುವುದನ್ನು ಶುಕ್ರವಾರ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು ಖಚಿತಪಡಿಸಿದ್ದರೂ ಅಧಿಕೃತ ಪ್ರತಿಯನ್ನು ಮಾತ್ರ ಬಿಡುಗಡೆಗೊಳಿಸಿಲ್ಲ. ಪಕ್ಷದ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು ನೀಡಿರುವ ವರದಿ ಮತ್ತು ಶಿಫಾರಸನ್ನು ಆಧರಿಸಿ ವರಿಷ್ಠರು ಏಳು ದಿನಗಳೊಳಗಾಗಿ ಉತ್ತರ ನೀಡುವಂತೆ ಶಿಸ್ತು ಕ್ರಮದ ನೋಟಿಸ್ ನೀಡಿದ್ದಾರೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಇದೇ ವೇಳೆ ನನಗೆ ಬಿಜೆಪಿ ಕೇಂದ್ರ ಶಿಸ್ತು ಸಮಿತಿಯಿಂದ ಯಾವುದೇ ನೋಟಿಸ್ ಬಂದಿಲ್ಲ. ನಾನು ಕ್ಷಮೆ ಕೇಳುವ ವ್ಯಕ್ತಿಯೂ ಅಲ್ಲ. ನಾನು ಪಕ್ಷ ವಿರೋಧಿ ಹೇಳಿಕೆ ನೀಡುತ್ತಿದ್ದೇನೆ ಎಂದು ಹೈಕಮಾಂಡ್‌ಗೂ ಕೂಡ ಅನಿಸಿಲ್ಲ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸ್ಪಷ್ಟಪಡಿಸಿದ್ದಾರೆ.

**ನೋಟಿಸ್ ಊಹಾಪೋಹ:** ಸುದ್ದಿಗಾರರೊಂದಿಗೆ ಮಾತನಾಡಿದ ಯತ್ನಾಳ್ ಅವರು, ನನಗೆ ನೋಟಿಸ್ ಕೊಟ್ಟಿದ್ದಾರೆ ಎಂಬುದು ಊಹಾಪೋಹದ ಸುದ್ದಿ ಅಷ್ಟೇ. ಇದುವರೆಗೆ ಯಾವುದೇ ನೋಟಿಸ್ ಕೈ ಸೇರಿಲ್ಲ. ನಾನು ಸತ್ಯದ ಪರವಾಗಿ ಹೋರಾಟ ಮಾಡುತ್ತಿದ್ದೇನೆ.

↘ 13

### ನನಗೆ ಭಯ ಇಲ್ಲ



**ನನಗೆ ನೋಟಿಸ್ ತಲುಪಿಲ್ಲ. ನಾನು ಯಾವುದಕ್ಕೂ ಭಯ ಪಡಲ್ಲ. ಭಯ ಅನ್ನೋದು ನನ್ನ ಡಿಕ್ಷನರಿಯಲ್ಲೇ ಇಲ್ಲ. ಸತ್ಯ ಹೇಳಿದ್ದೇನೆ. ಹಾಗಾಗಿ ಹೈಕಮಾಂಡ್ ಶಿಸ್ತು ಕ್ರಮ ಕೈಗೊಂಡರೂ ಭಯ ಇಲ್ಲ.**

• **ಬಸನಗೌಡ ಪಾಟೀಲ್ ಯತ್ನಾಳ್**
ಬಿಜೆಪಿ ಶಾಸಕ

15

# ಯತ್ನಾಳ್‌ಗೆ ಖಡಕ್ ನೋಟಿಸ್

13-2-21

ಮೊದಲ ಪುಟದಿಂದ

ನಾನು ಕ್ಷಮೆ ಕೇಳುವ ವ್ಯಕ್ತಿಯಲ್ಲ. ವಿಷಾದ ವ್ಯಕ್ತಪಡಿಸುವ ವ್ಯಕ್ತಿಯೂ ಅಲ್ಲ ಎಂದರು. ನೋಟಿಸ್ ತಲುಪಿದರೆ ಬೇಕಾದ ಉತ್ತರವನ್ನು ನಾನು ಕೊಡುತ್ತೇನೆ. ನನಗೆ ನೋಟಿಸ್ ಕೊಡಬೇಕು ಎಂಬ ಬೇಡಿಕೆ ಇತ್ತು. ಪಕ್ಷದ ರಾಜ್ಯ ಉಸ್ತುವಾರಿ ಮೇಲೆ ಯಾರ ಒತ್ತಡ ಇದೆ ಎಂದೂ ಅವರೇ ಹೇಳಬೇಕು. ನನ್ನನ್ನು ಮೂರು ಬಾರಿ ಪಕ್ಷದಿಂದ ಉಚ್ಚಾಟನೆ ಮಾಡಿದ್ದಾರೆ. ನಾನು ಯಾವತ್ತೂ ಹೆದರಿದವನಲ್ಲ. ನಾನು ಪಕ್ಷೇತರನಾಗಿ ವಿಧಾನ ಪರಿಷತ್‌ಗೆ ಗೆದ್ದು ಬಂದಿದ್ದೆ. ನನ್ನನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಕರೆದು ಅವಕಾಶ ಕೊಟ್ಟಿದ್ದು. ಅವರ ಸೂಚನೆಯಂತೆ ಬಿಜೆಪಿಗೆ ಮರಳಿದ್ದೆ. ನಾನು ಪಕ್ಷಕ್ಕೆ ಲಾಭ ಅಂತಾನೇ ತೆಗೆದುಕೊಂಡಿದ್ದು ಎಂದು ಹೇಳಿದರು.

ನಾ ದೈವಂ, ನಾ ಪಲಾಯಂ, ಸತ್ಯಮೇವ ಜಯತೇ ಎನ್ನುವುದನ್ನು ನಂಬಿದ್ದೇನೆ. ನಾನೊಬ್ಬ ಶಾಸಕನಾಗಿ ಶಾಸಕಾಂಗ ಪಕ್ಷದ ಸಭೆಯಲ್ಲೂ ಮಾತನಾಡಿದ್ದೇನೆ. ಸಂದರ್ಭ ಬಂದರೆ ಅನ್ಯಾಯವನ್ನು ಪ್ರಧಾನ ಮಂತ್ರಿಗಳ ಗಮನಕ್ಕೂ ತರುತ್ತೇನೆ. ನಾನು ಪಕ್ಷ ವಿರೋಧಿ ಹೇಳಿಕೆ ಕೊಟ್ಟಿದ್ದೀನಂತ ಹೈಕಮಾಂಡ್‌ಗೆ ಅನಿಸಿಲ್ಲ ಎಂದು ಸ್ಪಷ್ಟಪಡಿಸಿದರು.

## 21ರೊಳಗೆ ನೋಟಿಸ್ ಹಿಂಪಡೆಯಿರಿ: ಶ್ರೀ

ತುಮಕೂರು: ಶಾಸಕ ಯತ್ನಾಳ್ ಅವರಿಗೆ ಕೇಂದ್ರ ನೋಟಿಸ್ ನೀಡಿರುವುದಕ್ಕೆ ಜಯಮೃತ್ಯುಂಜಯ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದ್ದಾರೆ. ಜತೆಗೆ, ಫೆ.21ರ ಮೊದಲು ನೋಟಿಸ್ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಯತ್ನಾಳ್ ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ಸಮುದಾಯ ಒಗ್ಗಟ್ಟಾಗಿರುವುದನ್ನು ಸಹಿಸಲಾಗದೆ ಕೆಲ ಶಕ್ತಿಗಳು ತಪ್ಪು ಮಾಹಿತಿ ನೀಡಿರಬಹುದು ಎಂದು ಹೇಳಿದರು.

ಉತ್ತರ ಕರ್ನಾಟಕದವರೇ ಸಿಎಂ ಆಗ್ತಾರೆ ಎಂದು ಹೇಳಿದ್ದೆ. ಆದರೆ ಉತ್ತರ ಕರ್ನಾಟಕದವರು ಸಿಎಂ ಆಗೋದನ್ನು ತಡೆಯಲು ಸಂಚು ನಡೆದಿದೆ. ಇದರ ಹಿಂದೆ ಯಾರಿದ್ದಾರೆ ಎಂಬುದು ಗೊತ್ತು. ದೆಹಲಿಯಿಂದ ಕೇಂದ್ರದ ಇಬ್ಬರು ನಾಯಕರು ರಾಜ್ಯಕ್ಕಾಗಮಿಸಿ ಶಾಸಕರ ದೂರು ಕೇಳಲಿ ಎಂದು ಕಿಡಿಕಾರಿದರು.